ಜಿಲ್ಲಾಪರಿಷತ್‌ಗಳು ಅಸ್ತಿತ್ವಕ್ಕೆ ಬಂದಲಾಗಾಯ್ತು ಬೆಂಗಳೂರಿನಲ್ಲಿ ನಡೆದ ಅಧ್ಯಕ್ಷರ, ಉಪಧ್ಯಾಕ್ಷರ ಸಭೆಗಳು

177 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲಾ ಪರಿಷತ್ ಅಸ್ತಿತ್ವಕ್ಕೆ ಬಂದಲಾಗಾಯ್ತು ಬೆಂಗಳೂರಿನಲ್ಲಿ ನಡೆದ ಅಧ್ಯಕ್ಷರ, ಉಪಧ್ಯಾಕ್ಷರ ಸಭೆಗಳ ಸಂಖ್ಯೆ ಎಷ್ಟು?

ಆ) ಇದಕ್ಕಾಗಿ ವೆಚ್ಚವಾದ ಒಟ್ಟು ಮೊತ್ತ

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) 10

ಆ) ರೂ. 16240-00

ಕರ್ನಾಟಕ ರಾಜ್ಯಕ್ಕೆ ಪೆಟ್ರೋಲ್ ಮತ್ತು ಡೀಸಲ್ ಹಂಚಿಕೆ ಪ್ರಮಾಣ

636 - ಶ್ರೀ ಕೆ.ಲಕ್ಕಪ್ಪ (ಕುಣಿಗಲ್) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪೆಟ್ರೋಲ್ ಮತ್ತು ಡೀಸೆಲ್ ಅನ್ನು ಕರ್ನಾಟಕ ರಾಜ್ಯಕ್ಕೆ ಹಂಚಿಕೆ ಪ್ರಮಾಣವು ಅಕ್ಟೋಬರ್ 90ರಿಂದ ಜನವರಿ 91ರವರೆಗೆ ಎಷ್ಟಿರುತ್ತದೆ.

ಆ) ರಾಜ್ಯದಲ್ಲಿ ಡೀಸೆಲ್‌ನ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಇ) ಹಾಗಿದ್ದರೆ ಅಕ್ರಮ ದಾಸ್ತಾನನ್ನು ತಡೆಗಟ್ಟಲು ತೆಗೆದುಕೊಂಡ ಕ್ರಮಗಳು.

ಈ) ಪೆಟ್ರೋಲ್ ಮತ್ತು ಡೀಸೆಲ್‌ನ್ನು ಪಡಿತರ ಪದ್ದತಿಗೆ ಅಳವಡಿಸುವ ಯೋಜನೆ ಏನಾದರೂ ಇದೆಯೇ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ)

ತಿಂಗಳು	ಪೆಟ್ರೋಲ್	ಡೀಸಲ್
ಅಕ್ಟೋಬರ್ 90	ಪ್ರತಿ ತಿಂಗಳಿಗೆ	74362 ಮೆ.ಟನ್.
ನವೆಂಬರ್ 90	18,148	78225 "
ಡಿಸೆಂಬರ್ 90	ಮೆಟ್ರಿಕ್ ಟನ್	87564 ಮೆ.ಟನ್
ಜನವರಿ 91	ಹಂಚಿಕೆಯಾಗುತ್ತಿದೆ.	92347 ಮೆ.ಟನ್

ಆ) ಹೌದು.

ಇ) ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಹಾಗೂ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಅಧಿಕಾರಿಗಳಿಗೆ ಅಧಿಕಾರವನ್ನು ನೀಡಿ ತೀವ್ರ ರೀತಿಯಲ್ಲಿ ಅಕ್ರಮ ಮಾರಾಟಗಾರರ ಹಾಗೂ ಕಾಳತಂತೆಕೋರರ ವಿರುದ್ಧ ದಾಳಿಯನ್ನು ನಡೆಸುವಂತೆ ತಿಳಿಸಲಾಗಿದೆ. ಹಾಗೆಯೇ ತಪ್ಪಿತಸ್ಥರ ವಿರುದ್ಧ ಅಗತ್ಯ ವಸ್ತುಗಳ ಅಧಿನಿಯಮದ ರೀತ್ಯಾ ಕ್ರಮವನ್ನು ತೆಗೆದುಕೊಳ್ಳಲಾಗುತ್ತಿದೆ.

ಈ) ಸದ್ಯದಲ್ಲಿ ಈ ಪ್ರಸ್ತಾವನೆ ಸರ್ಕಾರದ ಮಟ್ಟದಲ್ಲಿ ಇರುವುದಿಲ್ಲ.

ಅಧ್ಯಕ್ಷರು : ಚುಕ್ಕೆ ರಹಿತ ಪ್ರಶ್ನೆಗಳನ್ನು ಸಭೆಯಮುಂದೆ ಮಂಡಿಸಲಾಯಿತು.